

ಗುಂಡ ಹೊಸದಾಗಿ ಮದುವೆಯಾಗಿದ್ದ. ಅವನ ಅತ್ತೆ ಮನೆಗೆ ಬಂದಿದ್ದರು. ಅವರಲ್ಲಿ ನಿಮ್ಮ ಮಗಳಂಥ ವ್ಯಕ್ತಿಗಳು ಲಕ್ಷಕ್ಕೊಬ್ಬರು ಸಿಗುತ್ತಾರೆ. ಅವಳಷ್ಟು ಒಳ್ಳೆಯವಳನ್ನು ನಾನು ಈವರೆಗೆ ನೋಡಿಲ್ಲ, ಎಂದೆಲ್ಲ ಹೊಗಳಲಾರಂಭಿಸಿದ.

ಅತ್ತೆ ಬೇಸರಿದಂದ ಹೇಳಿದರು: ಏನು ಮಾಡೋಣ ಹೇಳು. ಅವಳ ಯೋಗ್ಯತೆಗೆ ಸರಿಯಾದ ಗಂಡ ಸಿಗಲಿಲ್ಲ.

★★★

ಮೇಷ್ಟ್ರು: ಲೋ ಗುಂಡ ಸ್ಕೂಲ್‌ಗೆ ದಿನಾಲೂ ನಡೆದುಕೊಂಡು ಬರ್ತೀಯಲ್ಲ ಸರ್ಕಾರ ಕೊಟ್ಟ ಸೈಕಲ್ ಏನಾಯ್ತೋ?

ಗುಂಡ: ಎಲ್ಲರಿಗೂ ಉಪಯೋಗ ಆಗ್ಲೀ ಅಂತ ಬಾಡಿಗೆಗೆ ಬಿಟ್ಟಿದ್ದೀನಿ ಸಾರ್!

★★★

ಮೇಷ್ಟ್ರು: ಹಳ್ಳಿ ಮತ್ತು ಪಟ್ಟಣಗಳಿಗೆ ಏನು ವ್ಯತ್ಯಾಸ ಹೇಳು?

ಗುಂಡ: ಹಳ್ಳಿಗಳಲ್ಲಿ ದನಗಳನ್ನು ಕಟ್ಟಿ ಹಾಕುತ್ತಾರೆ. ನಾಯಿಗಳು ಅಲೆದಾಡುತ್ತವೆ. ಪಟ್ಟಣಗಳಲ್ಲಿ ನಾಯಿಗಳನ್ನು ಕಟ್ಟಿ ಹಾಕುತ್ತಾರೆ. ದನಗಳು ಅಲೆಯುತ್ತವೆ.

★★★

ಗೆಳತಿ: ನಿನ್ನ ಗಂಡ ಗುಣವಂತ, ರೂಪವಂತ, ಸಿರಿವಂತ.

ಗುಂಡನ ಹೆಂಡತಿ: ಸುಮ್ಮನೆ ರೂಮರ್ ಹಬ್ಬಿಸಬೇಡ ಕಣೆ!

★★★

ಪತಿ: ಪತ್ನಿ ರಾತ್ರಿ ಮಂಚದ ಮೇಲೆ ಅಡಿಕೆ ಮೆಲ್ಲುತ್ತ ಸಲ್ಲಾಪ ನಡೆಸಿದ್ದರು.

ಪತ್ನಿ: ನೀವು ನನ್ನನ್ನು ಪ್ರೀತಿಸುತ್ತೀರಾ?

ಪತಿ: ಯಸ್!

ಪತ್ನಿ: ತುಂಬಾ?

ಪತಿ: ಯಸ್ ಬಾಸ್ ತುಂಬಾನೇ!

ಪತ್ನಿ: ತುಂಬಾ ಅಂದ್ರೆ ಎಷ್ಟು? ಆಕಾಶದಷ್ಟು ಅಗಲವೆ? ಸಮುದ್ರದಷ್ಟು ಆಳವೆ?

ಪತಿ: ಹೌದೇ ಹೌದು!

ಪತ್ನಿ: ನಾನು ಸತ್ತು ಹೋದ್ರೆ ನೀವು ತುಂಬಾ ದುಃಖಿಸ್ತೀರಾ?

ಪತಿ: ಹೌದು ಕಣೇ!

ಪತ್ನಿ: ಹೇಗೆ ಅಳ್ತೀರಾ ಎಂದು ಒಮ್ಮೆ ನೋಡೋಣ.

ಪತಿ: ಹಾಗಾದರೆ ಒಮ್ಮೆ ಸತ್ತು ಬಿಡು ನೋಡೋಣ.

**(ಸಂಗ್ರಹ) ಕುಬೇರಪ್ಪ ಎಂ. ವಿಭೂತಿ**



ಡಾಕ್ಟರ್ ಹೆಂಡತಿ: ರೀ ನಮ್ಮ ಪುಟ್ಟೂಗೆ ಸಿಕ್ಕಾಪಟ್ಟೆ ಜ್ವರ ಬಂದಿದೆ. ಅವನನ್ನು ಸ್ಕೂಲಿಗೆ ಕಳಿಸಲೋ ಬೇಡವೋ?

ಡಾಕ್ಟರ್: ಮೊದಲು ಕಳಿಸು. ಎಲ್ಲಾ ಮಕ್ಕಳಿಗೂ ಜ್ವರ ಬಂದರೆ ನನ್ನ ಪ್ರಾಕ್ಟೀಸು ಜೋರಾಗಿ ನಡೆಯಬಹುದು.

★★★

ಹೆಂಡತಿ: ರೀ ನೀವು ಆ ಕಪ್ಪು ಕನ್ನಡಕ ಹಾಕಿಕೊಳ್ಳಬೇಡಿ.

ಗುಂಡ: ಯಾಕೆ?

ಹೆಂಡತಿ: ನೀವು ಅದನ್ನು ಹಾಕಿ ಕೊಂಡಾಗ ಮಾಲ್‌ನಲ್ಲಿ ಯಾರನ್ನು ನೋಡ್ತಾ ಇರ್ತೀರಾಂತ ಗೊತ್ತಾಗೋದೇ ಇಲ್ಲ.

★★★

ಗುಂಡ: ರೀ ಡ್ರೈವರ್, ನಾನು ಆಗಿನಿಂದಲೂ ವಿಶಲ್ ಹೊಡೀತಾ ಇದೀನಿ. ಬಸ್ಸನ್ನು ನಿಲ್ಲಿಸಬಾರದಾ?

ಡ್ರೈವರ್: ಆಗಿನಿಂದ ಬ್ರೇಕ್ ಹಾಕ್ತಾ ಇದೀನಿ, ಆದರೂ ಬಸ್ಸು ನಿಲ್ತಾ ಇಲ್ಲ. ಇನ್ನು ನಿಮ್ಮ ವಿಶಲ್‌ಗೆ ನಿಲ್ಲುತ್ತಾ?

★★★

ರಾಧಾ: ನಮ್ಮ ಗೆಳತಿ ಸುಮತಿ ಇದಾಳಲ್ಲ ಅವಳ ಬಗ್ಗೆ ಒಂದೆರೆಡು ಗುಟ್ಟಿನ ವಿಷಯ ಹೇಳೋಣಾಂತ ಬಂದೆ. ಆದರೆ ವಿಪರೀತ ಗಂಟಲು ಕೆರೆತ. ಏನನ್ನೂ ಹೇಳೋಕೆ ಆಗ್ತಾ ಇಲ್ಲ, ಏನು ಮಾಡಲಿ?

ಅಂಬುಜಮ್ಮ: ಅದಕ್ಯಾಕೆ ಅಷ್ಟು ಯೋಚನೆ ಮಾಡ್ತೀಯಾ? ಶುಂಠಿ ಕಷಾಯ ಮಾಡಿ ಕೊಡ್ತೀನಿ. ಕುಡಿದು ಹೇಳ್ತೀಯಂತೆ, ಕುಳಿತುಕೋ.

**(ಸಂಗ್ರಹ) ಎಂ.ಕೆ.ಮಂಜುನಾಥ್, ಬೆಂಗಳೂರು**